

# ಬಾಲಿವುಡ್‌ನ ಭರೇ ಜೋಡಿ

ರಣ್‌ವೀರ್‌ಸಿಂಗ್ ಮತ್ತು ದೀಪಿಕಾ ಪಡುಕೋಣೆ ಬಾಲಿವುಡ್‌ನ ಸದ್ಯದ 'ಹಾಟ್' ಜೋಡಿ. ಮದುವೆಯಾದ ಬಳಿಕವೂ ಇವರಿಬ್ಬರು ಪ್ರೇಮಿಗಳಂತೆ ಆಡುವುದನ್ನು ನಿಲ್ಲಿಸಿಲ್ಲ. ರಣ್‌ವೀರ್ ಸಿಂಗ್ ಇದ್ದಲ್ಲಂತೂ ಸಿಕ್ಕಾಪಟ್ಟೆ ಜೋಶ್ ತುಂಬಿರುತ್ತದೆ. 2013ರಲ್ಲಿ 'ರಾಮ್‌ಲೀಲಾ..' ಸಿನಿಮಾದ ಸೆಟ್‌ನಲ್ಲಿ ಪರಿಚಯವಾದ ಇವರಿಬ್ಬರ ಪ್ರೇಮ ಐದು ವರ್ಷಗಳ ಕಾಲ ನಡೆದು, ಕಳೆದ ವರ್ಷ ಡಿಸೆಂಬರ್‌ನಲ್ಲಿ ಮದುವೆಯಾಯಿತು. ಮದುವೆಯಾದರೂ ವೃತ್ತಿ ಜೀವನದಲ್ಲಿ ಇಬ್ಬರಿಗೂ ಬೇಡಿಕೆ ಕಡಿಮೆಯಾಗಿಲ್ಲ ಎನ್ನುವುದು ಕುತೂಹಲಕರ.

ಇನ್‌ಸ್ಟಾಗ್ರಾಮ್‌ನಲ್ಲಿ ರಣ್‌ವೀರ್ ಕಳೆದ ವಾರ ತನ್ನದೊಂದು ಫೋಟೊ ಅಪ್‌ಲೋಡ್ ಮಾಡಿದ್ದ. ನೀಲಿ ಶೇರ್ವಾನಿ, ಅದರ ಮೇಲೆ ಚಿನ್ನದ ನೆರಿಗೆ, ಮೀಸೆ ಗಡ್ಡ ಬೋಳಿಸಿಕೊಂಡ ಚಿತ್ರವದು. ಕೆಳಗೊಂದು ಅಡಿಬರಹ– 'ಇದೀಗ ಮದುವೆ ಸೀಸನ್. ನಿಮ್ಮ ಮನರಂಜಿಸಲು ಬಾಡಿಗೆಗೆ ಸಿದ್ಧ. ಯಾವುದೇ ಸಮಾರಂಭ, ಮದುವೆ, ಪಾರ್ಟಿ ಎಲ್ಲಕ್ಕೂ ರೆಡಿ.' ರಣ್‌ವೀರ್ ನೀಡಿದ್ದ ಈ ಅಡಿಬರಹಕ್ಕೆ ಮೊದಲ ಪ್ರತಿಕ್ರಿಯೆ ಬಂದದ್ದು ದೀಪಿಕಾಳಿಂದಲೇ. 'ಕಾಂಟ್ಯಾಕ್ಟ್ ದೀಪಿಕಾ ಪಡುಕೋಣೆ ಫಾರ್ ಬುಕಿಂಗ್' ಎಂದು ಆಕೆ ಬರೆದಿದ್ದಳು! ತಮ್ಮನ್ನೇ ತಾವು ತಮಾಷೆ ಮಾಡಿಕೊಳ್ಳುವುದರಲ್ಲಿ ಇಬ್ಬರಿಗೂ ಪೈಪೋಟಿ.

ಪ್ರತಿ ಸಲ ದೀಪಾವಳಿ ಹಬ್ಬಕ್ಕೆ ಅಮಿತಾಭ್ ಬಚ್ಚನ್ ಕೊಡುವ ಪಾರ್ಟಿ ಬಾಲಿವುಡ್‌ನಲ್ಲಿ ಸುಪ್ರಸಿದ್ಧ. ಬಾಲಿವುಡ್‌ನ ಬಹುತೇಕ ತಾರೆಯರು ಅಲ್ಲಿರುತ್ತಾರೆ. ಈ ಸಲವೂ ಶಾರೂಕ್, ಸಲ್ಮಾನ್, ಅನಿಲ್ ಕಪೂರ್– ಹೀಗೆ ತಾರೆಯರ ದಂಡೇ ಸೇರಿತ್ತು. ಆದರೆ ರಣ್‌ವೀರ್ ಮತ್ತು ದೀಪಿಕಾ ಇಬ್ಬರೂ ಕಣ್ಮರೆ. ಆಮೇಲೆ ವಿಚಾರಿಸಿದರೆ ಗೊತ್ತಾದದ್ದು ಇಬ್ಬರೂ ಈ ಸಲ ದೀಪಾವಳಿಯನ್ನು ತಮ್ಮ ಕುಟುಂಬದ ಸದಸ್ಯರ ಜೊತೆಗೆ ಸದ್ದಿಲ್ಲದೆ ಮುಂಬೈಯ ಮನೆಯಲ್ಲೇ ಆಚರಿಸಿದರಂತೆ. 2–3 ದಿನ ನೆಮ್ಮದಿಯಾಗಿ ಕುಟುಂಬ ಸದಸ್ಯರ ಜೊತೆಗೆ ಕಾಲ ಕಳೆಯಬೇಕೆಂದು ಅವರು ಮೊದಲೇ ನಿರ್ಧರಿಸಿದ್ದರಂತೆ.

ವೃತ್ತಿಯಲ್ಲೂ ಇಬ್ಬರೂ ಬ್ಯುಸಿ. ದೀಪಿಕಾ ಕರಣ್ ಜೋಹರ್ ನಿರ್ಮಾಣದ 'ಮಹಾಭಾರತ'ದಲ್ಲಿ ದ್ರೌಪದಿ ಪಾತ್ರ ವಹಿಸುವುದು ಈಗಾಗಲೇ ದೊಡ್ಡ ಸುದ್ದಿಯಾಗಿದೆ. ಶಕುನ್ ಭಾತ್ರಾ ಈ ಚಿತ್ರದ ನಿರ್ದೇಶಕ. ರಣ್‌ವೀರ್ ಮುಂದಿನ ಚಿತ್ರ 'ಜಯೇಶ್ ಭಾಯ್ ಜೋರ್ದಾರ್' ಯಶ್‌ರಾಜ್ ಫಿಲಂಸ್‌ನ ಕೊಡುಗೆ.

ಅಂದ ಹಾಗೆ ಗಂಡ– ಹೆಂಡತಿ ಇಬ್ಬರೂ '83' ಎಂಬ ಚಿತ್ರದಲ್ಲಿ ಒಟ್ಟಿಗೇ ನಟಿಸುತ್ತಿರುವುದು ವಿಶೇಷ. 1983ರಲ್ಲಿ ಮೊದಲ ಬಾರಿಗೆ ವಿಶ್ವಕಪ್ ಗೆದ್ದ ಭಾರತ ಕ್ರಿಕೆಟ್ ತಂಡದ ಸಾಧನೆಯ ಬಗ್ಗೆಯೇ ಈ ಸಿನಿಮಾ ಇದೆ. ರಣ್‌ವೀರ್ ಈ ಚಿತ್ರದಲ್ಲಿ ಭಾರತ ತಂಡದ ಆಗಿನ ಕಪ್ತಾನ ಕಪಿಲ್‌ದೇವ್ ಪಾತ್ರ ವಹಿಸಿದರೆ, ಕಪಿಲ್ ಪತ್ನಿ ರೋಮಿ ಪಾತ್ರವನ್ನು ದೀಪಿಕಾ ನಿರ್ವಹಿಸಲಿದ್ದಾಳೆ.

ದೀಪಿಕಾ ದ್ರೌಪದಿ ಪಾತ್ರಾಭಿನಯದ ಹೊಸ ಚಿತ್ರ ಮುಂದಿನ ವರ್ಷ ದೀಪಾವಳಿಗೆ ಬಿಡುಗಡೆ ಆಗಲಿದೆ. ಅದೇ ವೇಳೆ ಸಂಜಯ್ ಲೀಲಾ ಬನ್ಸಾಲಿ ನಿರ್ದೇಶನದ 'ಬೈಜು ಬಾವ್ರಾ' ಕೂಡಾ ಬಿಡುಗಡೆಗೆ ದಿನ ನಿಗದಿಯಾಗಿದೆ. ಗುರು– ಶಿಷ್ಯೆಯರ ಈ ಬಾಕ್ಸಾಫೀಸ್ ಕದನದ ಬಗ್ಗೆಯೂ ಬಾಲಿವುಡ್‌ನಲ್ಲಿ ಕುತೂಹಲ ಉಂಟಾಗಿದೆ. ಈ ಮಧ್ಯೆ ದೀಪಿಕಾ ಗರ್ಭಿಣಿಯಾಗಿದ್ದಾಳೆಂಬ ಗಾಳಿಸುದ್ದಿಯೂ ಹಬ್ಬಿದೆ.

■ ಹನಿ